## ಅಪರ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಹೊಳಲ್ಕೆರೆ

ಉಪಸ್ಥಿತರುಃ ನಿರುಪಮಾ. ಆರ್.ಡಿ.
ಬಿ.ಎ. ಎಲ್.ಎಲ್.ಬಿ.,
ಅಪರ ಸಿವಿಲ್ ಮತ್ತು ನ್ಯಾಯಿಕ ದಂಡಾಧಿಕಾರಿಗಳು,
ಹೊಳಲ್ಕೆರೆ

**ಸಿ.ಸಿ ನಂ.1647/2024**

<u>ಫಿರ್ಯಾದುದಾರರುಃ</u> ಕರ್ನಾಟಕ ಸರ್ಕಾರದ ಪರವಾಗಿ ಹೊಳಲ್ಕೆರೆ ಪೋಲಿಸ್ ಠಾಣೆ.

ವಿರುದ್ಧ

<u>ಆರೋಪಿ</u> ಭೀಮಾನಾಯ್ಕ ತಂದೆ ತಾವರನಾಯ್ಕ
ಸುಮಾರು 47 ವರ್ಷ,
ಡ್ರೈವರ್ ಕೆಲಸ
ಕೆಎ-16 ಟಿ.ಬಿ-5146 ಟ್ರ್ಯಾಕ್ಟರ್
ಕೆಎ-16 ಟಿ.ಬಿ-5147 ಟ್ರೆಲರ್
ವಾಸಃ ಗರಗ ಫಾರೆಸ್ಟ್ ಗಿಲ್ಕೇನಹಳ್ಳಿ ಅಂಚೆ
ಹೊಳಲ್ಕೆರೆ ತಾಲ್ಲೂಕು
ಚಿತ್ರದುರ್ಗ ಜಿಲ್ಲೆ.

<u>ದೋಷಾರೋಪಣೆ</u>

ನಾನು ನಿರುಪಮಾ.ಆರ್.ಢಂಗ. ಅಪರ ಸಿವಿಲ್ ಮತ್ತು ನ್ಯಾಯಿಕ ದಂಡಾಧಿಕಾರಿಗಳು, ಹೊಳಲ್ಕೆರೆ ಆಪಾದಿಸುವುದೇನೆಂದರೆ,

ದಿಃ 24/03/2024 ರಂದು ಮಧ್ಯಾಹ್ನ ಸುಮಾರು 1-00 ಗಂಟೆ ಸಮಯದಲ್ಲಿ ಆರೋಪಿಯಾದ ನೀನು ಚಿತ್ರಹಳ್ಳಿಗೇಟ್ ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿ ಕೆಎ-16-ಟಿಬಿ-5146 ನೇ ನಂಬರಿನ ಟ್ರ್ಯಾಕ್ಟರ್ ಮತ್ತು ಕೆ-16 ಟಿಬಿ-5147 ನೇ ನಂಬರಿನ ಟ್ರೇಲರ್ ನ್ನು ತಾಳ್ಯ ಗ್ರಾಮದ ಕಡೆಯಿಂದ ಮಲಸಿಂಗನಹಳ್ಳಿ ಗ್ರಾಮದ ಕಡೆಗೆ ಮಾನವನ ಪ್ರಾಣಕ್ಕೆ ಆಪಾಯವಾಗುವ ರೀತಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಮಲಸಿಂಗನಹಳ್ಳಿ ಮತ್ತು ತಾಳ್ಯ ಗ್ರಾಮದ ನಡುವೆ ತಾಳ್ಯ ಗ್ರಾಮದ ಮೀಸೆ ಮಾರುತೇಶ್ ರವರ ತೆಂಗಿನ ತೋಟದ ಮುಂದಿನ ಟಾರ್ ರಸ್ತೆಯಲ್ಲಿ ಎದುರುಗಡೆಯಿಂದ ಅಂದರೆ ಮಲಸಿಂಗನಹಳ್ಳಿ ಗ್ರಾಮದ ಕಡೆಯಿಂದ ತಾಳ್ಯ ಗ್ರಾಮದ ಕಡೆಗೆ ಬರುತ್ತಿದ್ದ ಕೆಎ-16 ಈಡಿ 9456 ನೇ ನಂಬರಿನ ಟಿ.ವಿ.ಎಸ್ ಎಕ್ಸ್ ಎಲ್ ಮೊಪೆಡ್ ಬೈಕಿಗೆ ಡಿಕ್ಕಿಪಡಿಸಿರುತ್ತೀರಿ, ಆ ಮೂಲಕ ಆರೋಪಿತರಾದ ನೀವು ಈ

ನ್ಯಾಯಾಲಯದ ಸಂಜ್ಞೆದೊಳಗೆ ಭಾಂ.ದಂ.ಸಂ. ಕಲಂ 279ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತನಾದ ನೀನು ಕೆಎ-16-ಟಿಬಿ-5146 ನೇ ನಂಬರಿನ ಟ್ರ್ಯಾಕ್ಟರ್ ಮತ್ತು ಕೆ-16 ಟಿಬಿ-5147 ನೇ ನಂಬರಿನ ಟ್ರೇಲರ್ ನ್ನು ತಾಳ್ಯ ಗ್ರಾಮದ ಕಡೆಯಿಂದ ಮಲಸಿಂಗನಹಳ್ಳಿ ಗ್ರಾಮದ ಕಡೆಗೆ ಮಾನವನ ಪ್ರಾಣಕ್ಕೆ ಆಪಾಯವಾಗುವ ರೀತಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಮಲಸಿಂಗನಹಳ್ಳಿ ಗ್ರಾಮದ ಕಡೆಯಿಂದ ತಾಳ್ಯ ಗ್ರಾಮದ ಕಡೆಗೆ ಬರುತ್ತಿದ್ದ ಕೆಎ-16 ಈಡಿ 9456 ನೇ ನಂಬರಿನ ಟಿ.ವಿ.ಎಸ್ ಎಕ್ಸ್ ಎಲ್ ಮೊಪೆಡ್ ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ಟಿ.ವಿ.ಎಸ್ ಮೊಪೆಡ್ ಚಾಲಕ ಚಾಸಾ-1 ಮತ್ತು ಅವರ ಮಗ ಮಂಜುನಾಥ ಇಬ್ಬರು ಕೆಳಗೆ ಬಿದ್ದಿದ್ದು, ಚಾಸಾ-1 ರವರಿಗೆ ಸಣ್ಣಪುಟ್ಟ ಪೆಟ್ಟಾಗಿದ್ದು, ಅವರ ಮಗ ಮಂಜುನಾಥನಿಗೆ ತಲೆಗೆ ಮತ್ತು ಮುಖಕ್ಕೆ ಬಲವಾದ ಪೆಟ್ಟು ಬಿದ್ದು ರಕ್ತಗಾಯಗಳಾಗಿದ್ದು, ಆ ಮೂಲಕ ಆರೋಪಿಯಾದ ನೀವು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾಂ.ದಂ.ಸಂ.ಕಲಂ.337 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀನು ಚಾಸಾ-1 ರವರ ಮೊಪೆಡ್ ಬೈಕಿಗೆ ಡಿಕ್ಕಿಪಡಿಸಿದ ಪರಿಣಾಮ ಚಾಸಾ-1 ರವರ ಮಗ ಮಂಜುನಾಥನಿಗೆ ತಲೆಗೆ ಮತ್ತು ಮುಖಕ್ಕೆ ಬಲವಾದ ಪೆಟ್ಟು ಬಿದ್ದು ತೀವ್ರ ಸ್ವರೂಪದ ರಕ್ತಗಾಯಗಳಾಗಿದ್ದು, ಸದರಿಯವರು ಮಾರ್ಗ ಮಧ್ಯೆ ಮೃತಪಟ್ಟಿರುವುದಾಗಿ ಅವರನ್ನು ಪರೀಕ್ಷಿಸಿದ ವೈದ್ಯರು ತಿಳಿಸಿದ್ದು, ಆ ಮೂಲಕ ಆರೋಪಿತರಾದ ನೀವು ಈ ನ್ಯಾಯಾಲಯದ ಸಂಜ್ಞೆದೊಳಗೆ ಭಾಂ.ದಂ.ಸಂ.ಕಲಂ.304(A)ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಎಸಗಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಅಪಘಾತಪಡಿಸಿದ ನಿನ್ನ ವಾಹನವನ್ನು ಸ್ಥಳದಲ್ಲಿಯೇ ನಿಲ್ಲಿಸಿ ಓಡಿಹೋಗಿದ್ದು, ಆ ಮೂಲಕ ಕಲಂ 187 ಭಾರತೀಯ ಮೋಟಾರ್ ಕಾಯ್ದೆ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾದೊಳಗೆ ಎಸಗಿರುತ್ತೀರಿ.

ನೀವು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ದಿನಾಂಕ: 05/03/2025
ಸ್ಥಳ : ಹೊಳಲ್ಕೆರೆ

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹೊಳಲ್ಕೆರೆ.